ಮೆಳ್ಳೆಗಣ್ಣಾಗಿದ್ದರಿಂದ ಅಕ್ಕಯ್ಯಮ್ಮ ಯಾರೊಂದಿಗೋ ನೋಡಿಕೊಂಡು ಇನ್ನ್ಯಾರೊಂದಿಗೋ ಮಾತನಾಡುತ್ತಿರುವಂತೆ ಕಾಣುತ್ತಿತ್ತು. ಊರಿನಲ್ಲಿ ಇಂಗ್ಲಿಷ್ ಕಲಿತ ಹುಡುಗರು ಅಕ್ಕಯ್ಯಮ್ಮನನ್ನು ನೋಡಿದಾಗ 'ಲುಕಿಂಗ್ ಟು ಲಂಡನ್ ಟಾಕಿಂಗ್ ಟು ಟೋಕಿಯೊ' ಎಂದು ರೇಗಿಸುತ್ತಿದ್ದರು.



ಈ ಏಳು ವರ್ಷಗಳಿಂದಲೂ ಊರಿನ ಅಂಗನವಾಡಿಯಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದ ಅಕ್ಕಯ್ಯಮ್ಮನಿಗೆ ಇವೊತ್ತು ಅತೀವ ಬೇಸರವಾಗಿತ್ತು. ಏಳು ವರ್ಷಗಳ ಹಿಂದೆ ಊರಿನ ಕೆಲವು ಯುವಕರು ತಾಲ್ಲೂಕು ಆಫೀಸಿನಲ್ಲಿ ಹೋರಾಟ ಮಾಡಿ ಊರಿಗೆ ಅಂಗನವಾಡಿಯನ್ನು ತಂದಿದ್ದರು. ಆಗ ಅಡುಗೆ ಮಾಡಲು ಕುಕ್ ಆಗಿ ನೇಮಕವಾಗಿದ್ದ ಜಯಮ್ಮನಿಗೆ ಹೆಲ್ಪರ್ ಆಗಿ ಅಕ್ಕಯ್ಯಮ್ಮನನ್ನು ನೇಮಿಸಿಕೊಂಡಿದ್ದರು. ಊರಿನ ಆಗಿನ ಚೇರ್ಮನ್ ಚಿಕ್ಕೀರಪ್ಪ ಅಕ್ಕಯ್ಯಮ್ಮ ಒಂಟಿ ಅಸಹಾಯಕ ಹೆಣ್ಣೆಂಗ್ಸು ಎಂದು ಸಪೋರ್ಟ್ ಮಾಡಿದ್ದರು. ನಲವತ್ತು ವರ್ಷಕ್ಕೆ ಅಕ್ಕಯ್ಯಮ್ಮ ಗೂರಲು ಗಂಡನನ್ನು ಕಳೆದುಕೊಂಡಿದ್ದಳು. ಮದುವೆಗೆ ಒದಗಿದ್ದ ಮಗಳನ್ನು ಶಿರಾದ ಕಡೆಯವರೊಬ್ಬರು ಸಿಂಪಲ್ಲಾಗಿ ಮದುವೆ ಮಾಡಿಕೊಂಡು ಹೋದ ಅನಂತರ ಅಕ್ಕಯ್ಯಮ್ಮನಿಗೆ ವಿಪರೀತ ಒಂಟಿತನ ಕಾಡುತ್ತಿತ್ತಾದರೂ ಊರಿನಲ್ಲಿ ಅವರಿವರ ಹಟ್ಟಿ ಮುಂದೆ ಕುಂತು ರಾಗಿ, ಅಕ್ಕಿ, ಕಾಳುಕಡಿ ಇತ್ಯಾದಿಗಳನ್ನು ಕ್ಲೀನ್ ಮಾಡಿಕೊಟ್ಟು ಅವರು ಕೊಟ್ಟ ಕಾಸನ್ನು ಇಸಿದುಕೊಳ್ಳುತ್ತಿದ್ದಳಲ್ಲದೆ ಸುಲಭವಾದ ಕೂಲಿನಾಲಿ ಕೆಲಸಗಳಿಗೆ ಹೋಗಿ ಬೇಜಾರು ಕಳೆದುಕೊಳ್ಳುತ್ತಿದ್ದಳು. ಅಕ್ಕಯ್ಯಮ್ಮನ ಪಡಿಪಾಟಲುಗಳನ್ನು ನೋಡಿದ್ದ ಚಿಕ್ಕೀರಪ್ಪ ಗಂಡು ದಿಕ್ಕಿಲ್ಲದ ಹೆಂಗಸೆಂದು ಹೆಲ್ಪರ್ ಪೋಸ್ಟಿಗೆ ಅಕ್ಕಯ್ಯಮ್ಮನನ್ನು ರೆಕ್ಮೆಂಡ್ ಮಾಡಿದ್ದರು. ಹಾಗಾಗಿ, ಆ ಕೆಲಸ ಅಕ್ಕಯ್ಯಮ್ಮನಿಗೆ ದಕ್ಕಿತ್ತು. ಅಕ್ಕಯ್ಯಮ್ಮ ತನ್ನ ಕೆಲಸವನ್ನು ತುಂಬಾ ಮುತುವರ್ಜಿಯಿಂದ, ಮಮಕಾರದಿಂದ ನಾಜೂಕಾಗಿ ನಿರ್ವಹಿಸುತ್ತಿದ್ದಳು. ಅಡುಗೆಯವಳಿಗೆ ಹೆಲ್ಪ್ ಮಾಡುವುದರ ಜೊತೆಗೆ ಅಂಗನವಾಡಿಗೆ ಬರುವ ಸಣ್ಣ ಮಕ್ಕಳು ಹೇತುಕೊಂಡರೆ, ಉಚ್ಚೆ ಹೊಯ್ದುಕೊಂಡರೆ ವಾಕರಿಸಿಕೊಳ್ಳದೆ ಚನ್ನಾಗಿ